**ಹಿರಿಯ ಶ್ರೇಣಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯದಲ್ಲಿ, ಜೇವರ್ಗಿ**

**<u>ಕ್ರಿಮಿನಲ್ ಮೊಕದ್ದಮೆ ಸಂಖ್ಯೆಃ 326/2022</u>**

**ಚಾ.ಸಾ - 1**
**ಪ್ರಾ.ಸಾ- 4**

**ಸಾಕ್ಷಿಗೆ ದಿನಾಂಕ 29-04-2026ರಂದು ಪ್ರಮಾಣ ವಚನ ಬೋಧಿಸಲಾಯಿತು.**

| | | |
|---|---|---|
| ಸಾಕ್ಷಿಯ ಹೆಸರು | ಃ | ಸಂಗಮೇಶ ಅಂಗಡಿ |
| ತಂದೆಯ ಹೆಸರು | ಃ | ಗುರಪ್ಪ |
| ವಯಸ್ಸು | ಃ | 32 ವರ್ಷ |
| ಉದ್ಯೋಗ | ಃ | DCRB ಕಲಬುರಗಿ |
| ವಾಸಸ್ಥಳ | ಃ | ಕಲಬುರಗಿ |

**<u>ಮುಖ್ಯವಿಚಾರಣೆ ಮಾನ್ಯ ಸ.ಸ.ಅ ರವರಿಂದ:</u>**

ನಾನು 06-03-2020 ರಿಂದ 30-01-2023ವರೆಗೆ ಜೇವರ್ಗಿ ಪೋಲಿಸ ಠಾಣೆಯಲ್ಲಿ ಆರಕ್ಷಕ ಉಪ-ನಿರೀಕ್ಷಕನಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿನಾಂಕ 14-12-2021ರಂದು ಸಂಜೆ 4-00 ಗಂಟೆಗೆ ನಾನು ಠಾಣೆಯಲ್ಲಿದ್ದಾಗ ಒಂದು ಬಾತ್ಮಿ ಬಂದಿರುತ್ತದೆ. ಪ್ರಭಾಕರ ಹಾಲಗಡ್ಲಾ ಎನ್ನುವವರು ಮಲ್ಲಾ ಬಿ ಗ್ರಾಮದಲ್ಲಿ ಇರುವ ಅವರ ಹೋಟೆಲ್ ಎದರಿಗೆ ಇರುವ ಸಾರ್ವಜನಿಕ ಸ್ಥಳದಲ್ಲಿ ಆರೋಪಿಯು ಅನಧಿಕೃತವಾಗಿ ಮದ್ಯದ ಪೌಚುಗಳನ್ನು ಇಟ್ಟುಕೊಂಡು ಮಾರಾಟ ಮಾಡುತ್ತಿದ್ದಾನೆಂದು ಬಾತ್ಮಿ ಬಂದಿರುತ್ತದೆ. ನಮ್ಮ ಠಾಣೆಯಲ್ಲಿ ಇದ್ದಂತಹ ಚಾಸಾ-4 ರಿಂದ 6ರವರಿಗೆ ಕರೆಯಿಸಿ ಬಾತ್ಮಿ ಬಂದ ವಿಷಯ ತಿಳಿಸಿರುತ್ತೆನೆ. ನಂತರ ಪಂಚರಾಗಿ ಚಾಸಾ-2 ಮತ್ತು 3ರವರನ್ನು ಬರಮಾಡಿಕೊಂಡು ಅವರಿಗೆ ಬಾತ್ಮಿ ಬಂದ ವಿಷಯ ತಿಳಿಸಿದಾಗ ಅವರು ಪಂಚರಾಗಲು ಒಪ್ಪಿ ಕೊಂಡಿರುತ್ತಾರೆ. ನಂತರ ನಾನು, ಚಾಸಾ-2 ರಿಂದ 6ರವರೊಂದಿಗೆ ಠಾಣಾ ಜೀಪ್ ನಂ.ಕೆಎ-32 ಜಿ-0671 ರಲ್ಲಿ ದಾಳಿ ಮಾಡಲು ಹೋದೆವು. ಬಾತ್ಮಿ ಬಂದ ಸ್ಥಳಕ್ಕೆ ಹೋಗಿ ಹೊಟೆಲ್ ಗೋಡೆಯ ಮರೆಯಲ್ಲಿ ನಿಂತು ನೋಡಲಾಗಿ ಒಬ್ಬ ವ್ಯಕ್ತಿಯು ಮದ್ಯದ ಪೌಚುಗಳನ್ನು ಇಟ್ಟುಕೊಂಡು ಮಾರಾಟ ಮಾಡುತ್ತಿರುವುದು ಕಂಡುಬಂದಿರುತ್ತದೆ. ನಂತರ 05-30 ಗಂಟೆ ಸುಮಾರಿಗೆ ದಾಳಿ ಮಾಡಿದೆವು. ನಾವೆಲ್ಲರೂ ದಾಳಿ ಮಾಡಲು ಹೋದಾಗ ನಮ್ಮನ್ನು ನೋಡಿ ಅಲ್ಲಿದ್ದಂತಹ ಮದ್ಯ ಖರೀದಿಸಲು ಬಂದಿದ್ದವರು ಮತ್ತು ಮದ್ಯ ಮಾರಾಟ ಮಾಡುವವರು ಓಡಿಹೋದರು. ಮದ್ಯ ಮಾರಾಟ ಮಾಡವವನಿಗೆ ಹಿಡಿದು ವಿಚಾರಿಸಿದಾಗ ಆತನು ತನ್ನ ಹೆಸರು ಪ್ರಭಾಕರ ತಂದೆ ಅಯ್ಯಣ್ಣಗೌಡ ಹಾಲಗಡ್ಲಾ ಎಂದು ತಿಳಿಸಿದನು. ಮದ್ಯದ ಪೌಚುಗಳನ್ನು ಮಾರಾಟ

ಮಾಡಲು ತನ್ನ ಹತ್ತಿರ ಯಾವುದೇ ಪರವಾನಿಗೆ ಇಲ್ಲ ಎಂದು ತಿಳಿಸಿದನು. ಆರೋಪಿಯು ಅನಧಿಕೃತವಾಗಿ ಮದ್ಯ ಮಾರಾಟ ಮಾಡುತ್ತಿರುವುದನ್ನು ಖಚಿತಪಡಿಸಿಕೊಂಡು ಇಬ್ಬರು ಪಂಚರ ಸಮಕ್ಷಮ ಸದರಿ ಮದ್ಯದ ಪೌಚುಗಳನ್ನು ಪರಿಶೀಲಿಸಲಾಗಿ 90 ಎಂ.ಎಲ್.ನ ಓರಿಜಿನಲ್ ಚಾಯ್ಸ್ ಡೀಲಕ್ಸ್ ವಿಸ್ಕಿ 62 ಪೌಚುಗಳು, 180 ಎಂ.ಎಲ್.ನ ಬ್ಯಾಗ್ ಪೈಪರ್ ಡಿಲಕ್ಸ್ ವಿಸ್ಕಿ 10 ಪೌಚುಗಳು ಇದ್ದು ಅವುಗಳ ಒಟ್ಟು ಬೆಲೆ ರೂ.3770/- ಆಗುತ್ತಿತ್ತು. ನಂತರ ಮದ್ಯದ ಪೌಚುಗಳನ್ನು ಪಂಚರ ಸಮಕ್ಷಮ ಜಪ್ತಿಪಡಿಸಿಕೊಂಡು ಸಂಜೆ 5-30 ರಿಂದ 6-30 ವರೆಗೆ ಜಪ್ತಿಪಂಚನಾಮೆ ಕೈಗೊಂಡಿರುತ್ತೇನೆ. ಮದ್ಯದ ಪೌಚುಗಳನ್ನು ಬಿಳಿ ಬಟ್ಟೆಯಲ್ಲಿ ಸುತ್ತಿ ಅದರ ಮೇಲೆ ಅರಗಿನ ಸೀಲ್ ಹಾಕಿ ಅದರ ಮೇಲೆ ಎ ಎಂಬ ಅಕ್ಷರದಿಂದ ಸೀಲ್ ಹಾಕಿ ಪಂಚರ ಸಹಿ ಇರುವ ಚೀಟಿ ಅಂಟಿಸಿರುತ್ತೇನೆ.

ಸದರಿ ಮುದ್ದೆಮಾಲುಗಳನ್ನು ನನ್ನ ತಾಬಾಕ್ಕೆ ಪಡೆದುಕೊಂಡಿರುತ್ತೇನೆ.

ಆರೋಪಿ, ಜಪ್ತಿ ಪಂಚನಾಮೆ ಮತ್ತು ಮುದ್ದೆಮಾಲುಗಳೊಂದಿಗೆ ರಾತ್ರಿ 9-30 ಗಂಟೆಗೆ ಠಾಣೆಗೆ ಬಂದು ಆರೋಪಿಯ ವಿರುದ್ಧ ವರದಿ ಚಾಸಾ-9 ರವರಿಗೆ ಸಲ್ಲಿಸಿರುತ್ತೇನೆ.

ಸಾಕ್ಷಿಗೆ ನಿಪಿ-3 ದೂರನ್ನು ತೋರಿಸಲಾಗಿ ಅದರ ಮೇಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದರಿಂದ ಸಾಕ್ಷಿ ಸಹಿಯನ್ನು ನಿಪಿ-3(ಬಿ) ಎಂದು ಗುರುತಿಸಲಾಯಿತು.

ಸಾಕ್ಷಿಗೆ ನಿಪಿ-1 ಜಪ್ತಿಪಂಚನಾಮೆಯನ್ನು ತೋರಿಸಲಾಗಿ ಅದರ ಮೇಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿರುತ್ತಾರೆ. ಸದರಿ ಸಹಿಯನ್ನು ನಿಪಿ-1(ಬಿ) ಗುರುತಿಸಲಾಯಿತು.

ಸಾಕ್ಷಿಗೆ ಎಂ.ಒ.-1 ರಿಂದ 72 ಮದ್ಯದ ಪೌಚುಗಳನ್ನು ತೋರಿಸಲಾಗಿ ಅವುಗಳನ್ನು ನೋಡಿ ಗುರುತಿಸಿರುತ್ತಾರೆ.

ಆರೋಪಿಯನ್ನು ನೋಡಿದರೆ ಗುರುತಿಸುತ್ತೇನೆ. ಆರೋಪಿ ಗೈರುಹಾಜರಾಗಿದ್ದು ಸದರಿ ಆರೋಪಿ ಗುರುತಿಸುವಿಕೆಯ ಬಗ್ಗೆ ಆರೋಪಿ ಪರ ವಕೀಲರು ಯಾವುದೇ ತಕರಾರು ಇಲ್ಲ ಎಂದು ತಿಳಿಸಿರುತ್ತಾರೆ.

**ಪಾಟಿ ಸವಾಲುಃ ಆರೋಪಿ ಪರ ಶ್ರೀ ಎಸ್.ಎನ್.ಕೆ. ವಕೀಲರಿಂದಃ**

ಗುನ್ನ ಸ್ಥಳಕ್ಕೆ ನರಿಬೋಳ-ರಾಜವಾಳ ಮಾರ್ಗವಾಗಿ ಹೋಗಿರುತ್ತೇನೆ. ಜೇವರ್ಗಿಯಿಂದ ಮಲ್ಲಾ ಬಿ ಗ್ರಾಮ 20 ರಿಂದ 25 ಕಿ.ಮೀ. ದೂರ ಆಗುತ್ತದೆ ಎಂದರೆ ಸರಿ. ಸದರಿ 20 ರಿಂದ 25 ಕಿ.ಮೀ. ದೂರ ಹೋಗಬೇಕಾದರೆ ನಿಮ್ಮ ವಾಹನದಲ್ಲಿ 30 ನಿಮಿಷದಲ್ಲಿ ಹೋಗಬಹುದು ಎಂದರೆ ರಸ್ತೆ ಸರಿ ಇಲ್ಲದಿದ್ದರೆ ಒಂದು ತಾಸು ಬೇಕಾಗುತ್ತದೆ ಎಂದು ಉತ್ತರಿಸುತ್ತಾರೆ. ನೀವು ಘಟನಾ ಸ್ಥಳಕ್ಕೆ ಹೋಗಬೇಕಾದರೆ ಅದಕ್ಕಿಂತ ಮೊದಲು ಬೇರೆ ಯಾರಿಗಾದರೂ ವಿಚಾರಣೆ ಮಾಡಿದ್ದೀರಾ ಎಂದರೆ ಯಾರಿಗೂ ವಿಚಾರಣೆ ಮಾಡಿಲ್ಲ ಎಂದು ಉತ್ತರಿಸುತ್ತಾರೆ. ಪಂಚರು ಜೇವರ್ಗಿಯ ಜೋಪಡಪಟ್ಟಿ ಏರಿಯಾದವರು ಆಗಿರುತ್ತಾರೆ. ಪಂಚರಿಗೆ ದಾಳಿ ವಿಷಯ ತಿಳಿಸಲು ಎಷ್ಟು ಸಮಯ ಬೇಕಾಯಿತು ಎಂದರೆ 4 ಗಂಟೆಯಿಂದ 4-15 ಆಗಿರಬಹುದು. ದಿನಾಂಕ 14-12-2021 ರಂದು ಮಲ್ಲಾ ಬಿ ಗ್ರಾಮಕ್ಕೆ ಹೋಗಿ ದಾಳಿ ಮಾಡಿದ್ದೀರಿ ಎಂದು ಸುಳ್ಳು ಹೇಳುತ್ತಿದ್ದೀರಿ

ಎಂದರೆ ಸರಿಯಲ್ಲ. ಜೇವರ್ಗಿಯಲ್ಲಿ ಅಬಕಾರಿ ಕಚೇರಿ ಇದೆ ಎಂದರೆ ಸರಿ. ನೀವು ದಾಳಿ ಮಾಡಲು ಅಬಕಾರಿ ಕಚೇರಿಯವರಿಗೆ ವರದಿ ಏನಾದರೂ ನೀಡಿದ್ದೀರಾ ಎಂದರೆ ಕರ್ನಾಟಕ ಅಬಕಾರಿ ಕಾಯ್ದೆಯಲ್ಲಿ ನಮಗೆ ಅಧಿಕಾರ ಕೊಟ್ಟಿರುದ್ದಾರೆ ನಾವೇ ಸ್ವತಂತ್ರ ದಾಳಿ ಮಾಡಿದ್ದೇವೆ ಎಂದು ಉತ್ತರಿಸುತ್ತಾರೆ. ಆರೋಪಿಯು ಯಾವುದೇ ಮದ್ಯದ ಪೌಚುಗಳನ್ನು ಮಾರಾಟ ಮಾಡಿಲ್ಲದಿದ್ದರೂ ಸಹ ಆತನಿಗೆ ತೊಂದರೆ ಕೊಡುವ ಉದ್ದೇಶದಿಂದ ಸುಳ್ಳು ದೂರು ನೀಡಿದ್ದೀರಿ ಎಂದರೆ ಸರಿಯಲ್ಲ. ಆರೋಪಿಗೂ ಮತ್ತು ಪ್ರಕರಣಕ್ಕೂ ಯಾವುದೇ ಸಂಬಂಧ ಇಲ್ಲದಿದ್ದರೂ ಸಹ ನಿಮ್ಮ ಠಾಣೆಯ ಅಂಕಿ ಅಂಶಕ್ಕಾಗಿ ಆರೋಪಿಯ ಮೇಲೆ ಸುಳ್ಳು ದೂರು ನೀಡಿ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು)
ಓ.ಹೇ.ಕೆ.ಸರಿ ಅದೆ.

ಹಿರಿಯ ಶ್ರೇಣಿ ಸಿವಿಲ್ ನ್ಯಾಯಾಧೀಶರು ಹಾಗೂ
ಪ್ರ.ದ.ನ್ಯಾ.ದಂಡಾಧಿಕಾರಿಗಳು ಜೇವರಗಿ